H9(2)

Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 80] ಗುರುವಾರ 21—11—46 [ಬಿಡಿ ಪ್ರತಿ 3 ಪೈ

ಸಂಯುಕ್ತ ಜನಾಂಗಗಳ

ವಿದ್ಯಾ, ರಸಾಯನಶಾಸ್ತ್ರ ಮತ್ತು ಕಲಾ ಸಂಸ್ಥೆಯಲ್ಲಿ

ರಷ್ಯಾ ಭಾಗವಹಿಸಲು ನಿರಾಕರಿಸಿದೆ

ಪ್ಯಾರಿಸ್ಸಿನಲ್ಲಿ ಈ ಸಂಸ್ಥೆ ನೊನ್ನೆ ಪ್ರಾರಂಭವಾಯಿತು.

ವಿವಾಹ ವಿಚ್ಛೇದನ

ಅಮೇರಿಕದ ಪ್ರಸಿದ್ಧ ಹಾಸ್ಯ ನಟ ಸಿನೆಮಾ ತಾರೆಯಾಗಿರುವ ಚಾರ್ಲಿಚಾಪ್ಲಿನನು ಮಾಡಿಕೊಂಡ ವಿವಾಹ ವಿಚ್ಛೇದಗಳಿಗಾಗಿ ೩೩ ಲಕ್ಷ ರೂಪಾಯಿ ಖರ್ಚಿಸಬೇಕಾಗಿಯಿತು. ಇನ್ನೊಬ್ಬ ಸಿನೆಮಾ ತಾರೆ ಜೊನ್ ಗಿಲ್ಬರ್ಟನು ವಿವಾಹ ವಿಚ್ಛೇದದಲ್ಲಿ ಹೆಂಡತಿಗೆ ನಾಲ್ಕು ಲಕ್ಷವನ್ನು ಕೊಡಬೇಕಾಯಿತಲ್ಲದೆ ಅವಳಲ್ಲಿ ಅವನಿಗಾದ ಮಗುವಿಗೆ ವರ್ಷಕ್ಕೆ ರೂಪ್ಯಾ 7 ಸಾವಿರದಂತೆ ತೆಂಬೇಕಾಯಿತು. ವಿಲಿಯಮ್ ಹಾರ್ಟ್ ಎಂಬಾತನು ತನ್ನ ಹಳೆ ಹೆಂಡತಿಗೆ ಏಳು ಲಕ್ಷ ರೂಪ್ಯಾ ಕೊಡಬೇಕಾಯಿತು. ಮಂಜು ಎಂಬಾತನು ತನ್ನ ಹಿಂದಿನ ಹೆಂಡತಿಗೆ ರೂಪ್ಯಾ 70000 ನಗದಿಯಲ್ಲಿಯೂ ರೂಪ್ಯಾ ೨ ಲಕ್ಷ ಬೆಲೆಯ ಒಂದು ಮನೆಯನ್ನೂ, ವಾರಕ್ಕೆ ರೂ 1750 ನ್ನೂ ಕೊಡಬೇಕಾಯಿತು. ಜೊನ್ ಹಾರ್ಲೊ ಎಂಬ ನಟಿಗೆ ತನ್ನ ಹಳೆ ಗಂಡನಿಂದ ೫] ಲಕ್ಷ ರೂಪಾಯಿ ದೊರಕಿತು.

ಅಮೇರಿಕದ ಸಿನೆಮಾ ನಟಿಗಳ ನೆಲೆಯಾಗಿರುವ ಹೊಲ್ಲಿವುಡ್‌ನಲ್ಲಿ ನಡೆಯುವ ಪ್ರಸಿದ್ಧ ವಿವಾಹ ವಿಚ್ಛೇದಗಳಲ್ಲಿ ಹೆಂಡತಿಗೆ ವರ್ಷಕ್ಕೆ ಕನಿಷ್ಟ ಪಕ್ಷ ೭೦೦೦ ರೂಪಾಯಿ ಕೊಡಬೇಕಾಗುತ್ತದೆ. ವಿಚ್ಛೇದ ಗೊಂಡ ಹೆಂಡತಿಯ ತಿಂಗಳ ಖರ್ಚು ಈ ಕೆಳಗಿನಂತೆ ಇದೆ.

ಬಾಡಿಗೆ ರೂ ೭೦೦ ಹಸೂರಿ ರೂ. ೧೫೦ ಅಡಿಗೆ ಮತ್ತು ಕೆಲಸದವಳಿಗೆ ರೂ. ೩೫೧ ಆಹಾರಕ್ಕೆ ರೂ ೧೧೦ ವಸ್ತ್ರಕ್ಕೆ ರೂ. ೨೧೦೦ ಆತಿಥ್ಯಕ್ಕೆ ರೂ. ೪೦೧ ಕಾರಿನ ಡ್ರೈವರ ರೂ ೭೦೦ ಔಷಧಕ್ಕೆ ರೂ ೪೦೦ ತಂತಿ ಟಪ್ಪಾಲು ರೂ ೧೫೦ ಸೌಂದರ್ಯಕ್ಕೆ ರೂ ೭೫ ವಸ್ತ್ರ ಮಡಿಗೆ ಕೊಡಲಿಕ್ಕೆ ರೂ. ೭೫ ಜುಮ್ಲಾ ರೂ ೫೮೦೦ ಹೀಗೆ ವರ್ಷಕ್ಕೆ ರೂ ೭೦೦೦೦ ಕೊಟ್ಟಲ್ಲಿಗಂಡ ಕಳೆದು ಕೊಂಡ ಬಡ ಹುಡುಗಿಗೆ ಕೈಯುಲ್ಲಿ ಕಾಸು ಉಳಿಯುವುದು ಕಷ್ಟ.

ಹೊಸ ವಿಮಾನ

36 ಟನ್ನುಗಳ ಭಾರವನ್ನು ಹೊರಬಲ್ಲ 10 ಸಾವಿರ ಮೈಲು ದೂರ ಹೋಗಬಲ್ಲ ಶಕ್ತಿಯುಳ್ಳ ಹೊಸ ವಿಮಾನವು ಕಂಡು ಹಿಡಿಯಲ್ಪಟ್ಟಿದೆ. ಪೆಟ್ರೋಲು ತೆಗೆದು ಕೊಳ್ಳಲು ದಾರಿಯಲ್ಲಿ ಎಲ್ಲಿಯೂ ನಿಲ್ಲಿಸಬೇಕಾಗಿರುವುದಿಲ್ಲ. ಪುನಃ ಯುದ್ಧವಾದಲ್ಲಿ ಲಂಡನ್ ಬಾಂಬುಗಳನ್ನು ಎಷ್ಟು ದೂರಕ್ಕಾದರೂ ಹೋಗಿ ಎಸೆದು ಬರಬಲ್ಲದೆಂದು ಹೇಳಲಾಗಿದೆ.

ಮತದ ಹುಚ್ಚು

ಮತದ ಹುಚ್ಚಿನಿಂದ ಗಲಾಟೆಯುಂಟು ಮಾಡುವಂಥವರನ್ನು ಕ್ರಮಪದ್ಧತಿಯಲ್ಲಿಡಲು ಕಾರ್ಯಕ್ರಮ ನಡೆಸಲ್ಪಡುತ್ತಿದೆ ಎಂದು ಶ್ರೀ ಪಟೇಲರು ಪ್ರಕಟಣೆ ಮಾಡಿರುವರು.

ಮೈಸೂರು ಹಿಂದೂಮಹಾಸಭಾ

ಬೆಂಗಳೂರು ನ 20— ಮೈಸೂರು ಹಿಂದೂಮಹಾಸಭಾ ಕಾರ್ಯಕಾರಿ ಸಮಿತಿ ಮೀಟಿಂಗು 26—11—46 ನೇ ಮಂಗಳವಾರ ಚಾಮರಾಜನಗರದಲ್ಲಿ ಜರಗುತ್ತದೆ. ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಮತ್ತು ಮದರಾಸು ಪ್ರಾಂತೀಯ ಹಿಂದೂಮಹಾಸಭಾ ಜನರಲ್ ಸೆಕ್ರೆಟರಿಗಳೂ ಆದ ಶ್ರೀ ಕೆ. ಶಿವನಕಾಡಿ ತೆವರು ಆ ದಿನವು ಬರಲು ದಯೆಯಿಟ್ಟು ಒಪ್ಪಿರುತ್ತಾರೆ. ಸಾಯಂಕಾಲ ಏರ್ಪಡಿಸಿರುವ ಬಹಿರಂಗ ಸಭೆಯಲ್ಲಿ ತ್ಯಾಗಳಾದ ಭೂಪಾಳಂರವರು, ಚಾಣ್ಣೇಂದ್ರ ಪ್ರಭುಗಳು ವಗೈರೆ ನಾಯಕರು ಭಾಷಣ ಮಾಡುವರು. ಬಾಮರಾಜನಗರದ ಹಿಂ || ಮು || ಸಭಾ ನಗರ ಸಮಿತಿಯವರು ಎಲ್ಲಾ ವ್ಯವಸ್ಥೆಯನ್ನೂ ಮಾಡಿರುತ್ತಾರೆ. ಸಮಿತಿ ಸದಸ್ಯರುಗಳೆಲ್ಲಾ ತಪ್ಪದೆ ದಯಮಾಡಿಸಬೇಕು.—ಎಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ವಾರ್ತೆಗಳು

ಇನ್ನು ಮುಂಬೆ ರಾವ್‌ಸಾಹೇಬ್ ಮಾಡಬಹದ್ದೂರ್ ನೊದಲಾದ ಎಲ್ಲಾ ಬಿರುದುಗಳನ್ನೂ ಕೊಡಕೂಡದೆಂದು ವೈಸ್ರಾಯರು ಚಕ್ರವರ್ತಿಗಳಿಗೆ ಸೂಚಿಸಬೇಕೆಂದು ದೆಹಲಿಯ ಶಾಸನಸಭೆಯಲ್ಲಿ ನಿರ್ಣಯಿಸಲ್ಪಟ್ಟಿದೆ.

ಂ ಂ

ಕಲ್ಕತ್ತಾದ ಹೌರಾ ಸ್ಟೇಷನ್ನಿನಲ್ಲಿ 8 ಕತ್ತಿಗಳ ಪೆಟ್ಟಿಗೆಗಳನ್ನು ರೈಲ್ವೇ ಪಾರ್ಸಲ್ಲುಗಳ ಮೂಲಕ ತರಿಸಿದ ಒಬ್ಬನನ್ನು ಪೋಲೀಸು ಅಧಿಕಾರಿಗಳು ಅನುಮಾನದ ಮೇಲೆ ದಸ್ತಗಿರಿ ಮಾಡಿ ವಿಚಾರಣೆ ನಡೆಸುತ್ತಿರುವರು.

ಂ ಂ

ನಡೆಯಲಿರುವ ರಾಜ್ಯಾಂಗ ಪರಿಷತ್ತಿನಲ್ಲಿ ಸಿಕ್ಕರು ಪ್ರಧಾನ ವಿಷಯಗಳಲ್ಲಿ ಕಾಂಗ್ರೆಸ್ಸಿನೊಂದಿಗೆ ಏಕೀಭವಿಸುವ ದಾಗಿಯೂ, ಸಿಕ್ ಜಾತಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ವೇಚ್ಛೆಯಾಗಿ ವರ್ತಿಸುವುದಾಗಿ ನಿರ್ಣಯಿಸಲಿರುವರು.

ಂ ಂ

ಚೀನಾಲಾ, ಬಾಪಾಟ್ಲಾ ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ಪ್ರವಾಹಗಳು ಬಂದು ಪೈರುಗಳಿಗೂ ಮನೆಗಳಿಗೂ ವಿಶೇಷ ನಷ್ಟವುಂಟಾಗಿದೆ.

ಂ ಂ

ಪೂರ್ವ ಬಂಗಾಳಾದ ಚಾಂದಪುರ ಮೊದಲಾದ ಸ್ಥಾನಗಳಲ್ಲಿ ಗೂಂಡಾಗಳ ದಾರುಣ ಹತ್ಯೆಗಳನ್ನು ಮಾಡುತ್ತಿರುವರು. ಗಾಂಧೀಯವರ ಉಪದೇಶ ಫಲಿಸುತ್ತಿರುವಂತೆ ಕಾಣಬರುವುದಿಲ್ಲ. ಜೈನಾರವರು ಮಾತ್ರವಾಶ್ಚವುದಿಲ್ಲ. ಪಾಲಂಟೀರೂ, ಅಲ್ಪಸಂಖ್ಯಾ ಜಾತಿಗಳವರೂ ಹಿಂಸಿಸಲ್ಪಡುತ್ತಿರುವರು. ಭಯಭೀತರಾಗಿ ಹತಶೇಷರಾದವರು ಅಸ್ಸಾಂ ಮೊದಲಾದ ಪ್ರದೇಶಗಳಿಗೆ ಪಲಾಯನ ಮಾಡುತ್ತಿರುವರು.

ಂ ಂ

ನೇಪಾಳ ಸರಕಾರಕ್ಕೆ ಭಾರತ ಸರಕಾರವು ಎರಡೂವರೆ ಕೋಟಿ ರೂ. ಸಾಲಾ ಕೊಡುವುದು ಹಣಕಾಸಿನ ಸ್ಥಾಯಿ ಸಮಿತಿಯಲ್ಲಿ ತೀರ್ಮಾನವಾಗಿದೆ.

ಭಾರತಕ್ಕೆ ಸ್ಥಾನ ಸಿಗಲಿಲ್ಲ

ಫ್ಲಷಿಂಗ್ [ನ್ಯೂಯಾರ್ಕ್ ನ 19 — ವಿಶ್ವಸಂಸ್ಥೆಯ ರಕ್ಷಣಾ ಸಮಿತಿ ಸದಸ್ಯತ್ವಕ್ಕೆ ನಡೆದ ಚುನಾವಣೆಯಲ್ಲಿ ಭಾರತಕ್ಕೆ 13 ಓಟುಗಳು ಬಂದು ಸ್ಥಾನ ದೊರೆಯಲಿಲ್ಲ. ರಷ್ಯಾವು ಭಾರತಕ್ಕೆ ಬೆಂಬಲವೀಯದಿದ್ದುದೇ ಭಾರತದ ಸೋಲಿಗೆ ಕಾರಣವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಬರ್ದವಾನ್ ರಾಜರ ಔದಾರ್ಯ

ಬರ್ದ್ವಾನ್ ನ 20 — ಹಿಂದೂ ಮಹಾಸಭೆಯ ವಿನಂತಿಯನ್ನು ಅಂಗೀಕರಿಸಿ ಬರ್ದವಾನ್ ಮಹಾರಾಜರು ಪೂರ್ವ ಬಂಗಾಳಾ ಗಲಭೆಗೆ ತುತ್ತಾದ ನಿರಾಶ್ರಿತರು ತಮ್ಮ ರಾಜ್ಯಕ್ಕೆ ನೆಲಸಲು ಬಂದಲ್ಲಿ ಅವರಿಗೆ ಉಚಿತವಾಗಿ ಸ್ಥಳ ಕೊಡಲು ಒಪ್ಪಿದ್ದಾರೆ.

ರೈಲು ನಿಲ್ಲಿಸಲಾಗಿವೆ

ಜರೂಸೆಲಂ ನ 17 — ಪ್ಯಾಲಿಸ್ಟೈನಿನಲ್ಲಿ ಭಯೋತ್ಪಾತಕರ ಗಲಾಟೆಗೆ ಕಲಸಗಾರರು ಹೆದರಿರುವುದರಿಂದ ಇಲ್ಲಿಯ ರೈಲುಗಳನ್ನು ನಿಲ್ಲಿಸಲಾಗಿದೆ.

ತೂಕ ಎತ್ತುವ ಪಂಧ್ಯ

ಕೊಲಂಬೊ ನ 17 — ಭಾರತಕ್ಕೂ ಸಿಲೋನಿಗೂ ತೂಕ ಎತ್ತುವ ಪಂಧ್ಯವು ಇಲ್ಲಿ ಡಿಸೆಂಬರ್ ೬ ಕ್ಕೆ ನಡೆಯುವುದು.

ಆಟೆಂಬಾಂಬಿಗೇ

ಅವರ್ ಪೂಲ್ ನ 19 — ಬೆಲ್ಜಿಯಂ ಹಡಗಿನೊಂದಕ್ಕಲ್ಲಿ ಬ್ರಿಟ್ಟನ್ನಿಗೆ ಆಟ್ಮಂಬಾಂಬ್ ತಯಾರಿಸಲು ಮುಖ್ಯವಾದ ಯುರೇನಿಯಂ 869 ಟನ್ ಬಂದಿದೆ.

ಹಡಗುಗಳ ಸಾವುನೋವು

ಬೊಂಬಾಯಿ ನ 19 — ಅರೇಬಿಯಾ ಸಮುದ್ರದ ಕಡೆಯಿಂದ ಬೀಸಿದ ತೀವ್ರಗಾಳಿಯಿಂದ ಅನೇಕ ಹಡಗು ಮತ್ತು ದೋಣಿಗಳಿಗೆ ತೀವ್ರವಾಯ ಒದಗಿರುವುದೆಂದು ಶಂಕಿಸಲಾಗಿದೆ.

ಪಂಚಾಯಿತಿಗೆ ಒಪ್ಪಿಸಲಾಗುತ್ತೆ

ಕಲ್ಕತ್ತಾ ನ 18 — ಬರ್ಮ ಕಂಪೆನಿಯ 1600ಗಿ ಕಬ್ಬಿಣ ಮತ್ತು ಉಕ್ಕು ಕೆಲಸಗಾರರು 3 ತಿಂಗಳಿಂದ ನಡೆಸುತ್ತಿರುವ ಮುಷ್ಕರವು ಸರಕಾರದಪರಿಂದ ಪಂಚಾಯಿತ್ ತೀರ್ಮಾನಕ್ಕೆ ಒಪ್ಪಿಸಲಾಗುವುದು.

ಅರಮನೆ ಸುದ್ದಿ

(ಬೆಂಗಳೂರು, ಮಂಗಳವಾರ 20 ನೇ ನವೆಂಬರ್ 1946)

ಶ್ರೀಮನ್ಮಹಾರಾಜರವರು ಈ ದಿವಸ ಈ ಕೆಳಗೆ ಕಂಡವರಿಗೆ ಭೇಟಿ ದಯಪಾಲಿಸಿದರು.—

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ || ಜಿ. ಸುಂದರರಾಯುರು

ಚೀಫ್ ಸ್ಕೌಟ್ ಕಮಿಷನರು ಮೇಜರ್ ವೈ. ವಿ. ಕೆ. ಮೂರ್ತಿ,

ಟ್ರೂತ್ ಪತ್ರಿಕೆಯ ನೂಜಿ ಸಂಪಾದಕರು ಶ್ರೀ ಕೆ. ನಾರಾಯಣಸ್ವಾಮಿಐಯರ್

ರಾ || ಸೀನಿಯಂ ಸರ್ಜನ್ ಶಸ್ತ್ರವೈದ್ಯಪ್ರವೀಣ ಡಾ || ಎಸ್. ಸುಬ್ಬರಾಯರು

ಡಿ||ಡಿ||ಪಿ||ಐ|| (ಪಾ|| ವಿದ್ಯಾಭ್ಯಾಸ) ಶ್ರೀ ಎಂ.ಎಸ್ ರಾಜಗೋಪಾಲರಾಯರು

ಮೈಸೂರು ಚೇಂಬರ್ ಆಫ್ ಕಾಮರ್ಸಿನ ಸೆಕ್ರೆಟರಿ ಶ್ರೀ ಕೆ. ಶಾಮಯ್ಯರು

ಚಿಕ್ಕಬಳ್ಳಾಪುರದ ವರ್ತಕರು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮಾಜಿ ಅಧ್ಯಕ್ಷ ಶ್ರೀ ಕೆ. ವೆಂಕಟಸಾಮಿಶೆಟ್ಟರು

ಬೆಂಗಳೂರು ' ಪೂರ್ಣಕ್ಯವೇಲು ಮ್ಯಾಷಕ್ ' ನ್ನಿನ ಶ್ರೀ ಸುಂದರ ಮೂರ್ತಿ ಮೊದಲಿಯಾರರು

ಎಸ್. ಐ. ರೈಲ್ವೆ ಮಾಜಿ ಚೀಫ್ ಟ್ರಾನ್ಸ್‌ಪೋರ್ಟು ಸೂಪರಿಂಟೆಂಡೆಂಟರು ಶ್ರೀ ಎಸ್. ಪೂರ್ಣಯ್ಯನವರು

ಶ್ರೀನಿವಾಸಪುರದ ಆರ್. ಎ. ನುತ್ತು ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ಮೆಂಬರು ಶ್ರೀ ಎಸ್. ರಾಮಪ್ಪನವರು

ಆರ್ಮಿ ಮತ್ತು ಇಂಜನೀರಿಂಗು ಕಂಟ್ರಾಕ್ಟರು ಶ್ರೀ ಎಸ್. ವೆಂಕಟಪ್ಪನವರು

ಕಡೂರು ಡಿಸ್ಟ್ರಿಕ್ಟ್ ಕಾಫೀಪ್ಲಾಂಟರು ಶ್ರೀ ಟಿ. ಬಿ. ಮಲ್ಲೇಗೌಡರು

ನಿವೃತ್ತ ನ್ಯಾಯಾಂಗ ಸಚಿವರು ರಾಜಮಂತ್ರಪ್ರವೀಣ ಎ. ವಿ. ರಾಮನಾಥಸ್ತರು

Talk-a-Tone

Premier Film Mag. of S. India
Local Agent— D. Mahaadev
c/o Opera Talkies, Myso

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agraahr Mysore.

At Opera
5th Houseful Week
Sri Murugan
ಶ್ರೀ ಮುರುಗನ್
ಹೊನ್ನಪ್ಪ ಭಾಗವತರ್, ಕಾಳಿ ಎಕ್ ರತ್ನ, ಮಾಲತಿ, ಜೀವರತ್ನ, ಯೋಗ ಮಂಗಳಂ ಮುಂತಾದವರು
ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit **From 15-11-46**
ಸೂರಿಯಮಾ - ಪಹರಿ - ಸನ್ಯಾಲ್ - ಷಾ ನವಾಜ್
ಪಾತ್ರವಹಿಸಿರುವ
ಮೈಕ್ಯಾಕರೂಂ
Mai Kya Karam
ಪ್ರತಿ ದಿನ 3 ಆಟಗಳು .... ಅವೋಫ್ ಹಿಂದಿ ಚಿತ್ರ

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ಕಯಾಸಿಂತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಗಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.